ದಿನಾಂಕ : 15-07-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಮ್‌ಎಚ್‌ಕೆ ವಕೀಲರಿಂದ :

ನನ್ನ ತಂದೆಯ ಪೂರ್ಣ ಹೆಸರು ಚಿಕ್ಕಪ್ಪ ತಂದೆ ಪೀರಪ್ಪ ಲಮಾಣಿ ಇರುತ್ತದೆ. ನಮ್ಮ ಅಜ್ಜನಾದ ಪೀರಪ್ಪನಿಗೆ 3 ಜನ ಗಂಡು ಮಕ್ಕಳು ಇದ್ದರು. ನಮ್ಮ ಅಜ್ಜನಿಗೆ ಒಬ್ಬಳು ಹೆಣ್ಣು ಮಗಳು ಇದ್ದಳು. ನಮ್ಮ ಅಜ್ಜನ ಮಕ್ಕಳ ಹೆಸರುಗಳು 1. ಚಿಕ್ಕಪ್ಪ 2. ದ್ಯಾವಪ್ಪ 3. ಈರಪ್ಪ ಇರುತ್ತದೆ. ನಮ್ಮ ಅಜ್ಜನ ಮಗಳ ಹೆಸರು ನನಗೆ ಗೊತ್ತಿಲ್ಲ. ನಮ್ಮ ಅಜ್ಜನಾದ ಪೀರಪ್ಪನಿಗೆ ಎಷ್ಟು ಜನ ಸಹೋದರರು ನನಗೆ ಗೊತ್ತಿಲ್ಲ. ನಮ್ಮ ಘರಾಣೆಗೆ ರಾಮಪ್ಪ ಲಮಾಣಿ ಎನ್ನುವವರು ಮೂಲಪುರುಷ ಇದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ರಾಮಪ್ಪ ಲಮಾಣಿ ಈತನಿಗೆ ಬಾಬಣ್ಣ, ಸೋಮಣ್ಣ, ಗೇಮಣ್ಣ ಮತ್ತು ನಮ್ಮ ಅಜ್ಜ ಪೀರಪ್ಪ ಎನ್ನುವವರು ಮಕ್ಕಳು ಇದ್ದರು ಅಂದರೆ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ರಾಮಪ್ಪ ಲಮಾಣಿ ಇವರ ಅವಿಭಕ್ತ ಕುಟುಂಬದ ವ್ಯವಹಾರವನ್ನು ಬಾಬಣ್ಣನ ಮಗ ಲಚ್ಚಪ್ಪ ನೋಡಿಕೊಳ್ಳುತ್ತಿದ್ದನು ಅಂದರೆ ನನಗೆ ಗೊತ್ತಿಲ್ಲ. ಸನ್ 1987 ರಲ್ಲಿ ನಮ್ಮ ಅಜ್ಜನ ಮಕ್ಕಳು ಹಾಗೂ ನಮ್ಮ ಅಜ್ಜನ ಅಣ್ಣತಮ್ಮಂದಿರರ ಮಕ್ಕಳು ಒಟ್ಟು ಘರಾಣೆಯ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪ್ರಕಾರ ಡ ನಂ 4390 ಮಂಜೂರು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಡ ನಂ 4390 ರ ಪ್ರಕಾರ 1 ನೇ ಹಿಸ್ಸೆ 1. ಸುಬ್ಬಪ್ಪ 2. ಮಲ್ಲಪ್ಪ ತಂದೆ ಚಿಕ್ಕಪ್ಪ ಲಮಾಣಿ 2 ನೇ ಹಿಸ್ಸೆ ದೇಮಪ್ಪ 3 ನೇ ಹಿಸ್ಸೆ ದ್ಯಾವಪ್ಪ 4 ನೇ ಹಿಸ್ಸೆ ಈರಪ್ಪ ತಂದೆ ಪೀರಪ್ಪ ಲಮಾಣಿ ಇವರಿಗೆ ಸರ್ವೇ ನಂ 139/1 ರ ಪೈಕಿ ಮತ್ತು 145 ರ ಪೈಕಿ ಹಿಸ್ಸೆ ಕೊಟ್ಟಿರುತ್ತಾರೆ ಅಂದರೆ ಸರಿ. ನನ್ನ ತಂದೆಗೆ ನಾನು ಮತ್ತು ಮಲ್ಲಪ್ಪ ಮಕ್ಕಳು ಇರುತ್ತೇವೆ. ಸುಬ್ಬಪ್ಪ, ಮಲ್ಲಪ್ಪ ತಂದೆ ಚಿಕ್ಕಪ್ಪ ಲಮಾಣಿ ಮತ್ತು ದೇಮಪ್ಪ, ದ್ಯಾವಪ್ಪ, ಈರಪ್ಪ ತಂದೆ ಪೀರಪ್ಪ ಲಮಾಣಿ ಇವರೆಲ್ಲರೂ ಒಂದೇ ಘರಾಣೆದವರು ಅಂದರೆ ಸುಳ್ಳು.

ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನಮ್ಮ ಘರಾಣೆಯ ಸರ್ವೇ ನಂಬರುಗಳು ನನಗೆ ಹೇಳಲು ಆಗುತ್ತದೆ. ಸರ್ವೇ ನಂ 145/3 ನಮ್ಮ ಘರಾಣೆಯ ಆಸ್ತಿ ಇರುತ್ತದೆ. ಅದರ ಹಿಸ್ಸೆ ನಂ ನನಗೆ ಗೊತ್ತಿಲ್ಲ. ನಮ್ಮ ಘರಾಣೆಗೆ ಇದು ಒಂದೇ ಆಸ್ತಿ ಇರುತ್ತದೆ. ಸದರಿ ಸರ್ವೇ ನಂ 145/3 6 ಎಕರೆ 23 ಗುಂಟೆ ಆಸ್ತಿ ಹೊಂದಿರುತ್ತದೆ ಅಂದರೆ ಸರಿ. ಸದರಿ ಆಸ್ತಿಯಲ್ಲಿ 2 ಎಕರೆ 7 ಗುಂಟೆ ನನಗೆ ಮತ್ತು ನನ್ನ ತಮ್ಮ ಮಲ್ಲಪ್ಪನಿಗೆ ಬಂದಿರುತ್ತದೆ ಅಂದರೆ ಸರಿ. ಅದೇ ರೀತಿ ಸರ್ವೇ ನಂ 139/1ಕ ನೇದ್ದರ 4 ಎಕರೆ 34 ಗುಂಟೆ ನೇದ್ದರ ಪೈಕಿ 1 ಎಕರೆ 26 ಗುಂಟೆ ಆಸ್ತಿ ನನಗೆ ಮತ್ತು ನನ್ನ ತಮ್ಮನಿಗೆ ಬಂದಿರುತ್ತದೆ ಅಂದರೆ ಸರಿ. ಸದರಿ 2 ಎಕರೆ 7 ಗುಂಟೆ ಮತ್ತು 1 ಎಕರೆ 26 ಗುಂಟೆ ನಮಗೆ ಬಂದಿರುವ ಬಗ್ಗೆ ಸನ್ 2004-05 ರಲ್ಲಿ ವಾಟ್ನಿ ಮಾಡಿಕೊಂಡಿದ್ದೇವೆ ಅಂದರೆ ಸರಿ. ನಾವು ಆಸ್ತಿಯನ್ನು ಈರಪ್ಪ, ದ್ಯಾವಪ್ಪ ಮತ್ತು ಚಿಕ್ಕಪ್ಪ ಇವರ ನಡುವೆ ಹಂಚಿಕೊಂಡಿದ್ದೇವೆ. ನಮ್ಮ ಹೊಲದ ಖಾತೆ ಬದಲಾವಣೆಗೆ ನಾವೇ ಅರ್ಜಿ ಕೊಟ್ಟಿದ್ದೇವೆ. ವಕೀಲರು ಸಾಕ್ಷಿಗೆ ನಿಪಿ 60 ರ ದಾಖಲೆಯನ್ನು ತೋರಿಸಿ ನೀವು ಕೊಟ್ಟ ಅರ್ಜಿ ಇದೇ ಇರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೌದು ಎಂದು ಉತ್ತರಿಸಿದ್ದಾರೆ. ವಕೀಲರು ಸಾಕ್ಷಿಗೆ ನಿಪಿ 61 ರ ದಾಖಲೆಯನ್ನು ತೋರಿಸಿ ನೀವು ಕಂದಾಯ ಇಲಾಖೆಗೆ ಹಾಜರು ಪಡಿಸಿದ ಅಪಸಾತ್ ವಾಟ್ನಿ ಪತ್ರ ಇದೇ ದಾಖಲೆ ಇರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಹೂಂ ಎಂದು ಉತ್ತರಿಸಿದ್ದಾರೆ. ದೇವಪ್ಪ ತಂದೆ ಪೀರಪ್ಪ ಲಮಾಣಿ ಇವರು ಪ್ರತಿವಾದಿ ನಂ 2 ಮತ್ತು 3 ನೇದ್ದವರ ತಂದೆ ಅಂದರೆ ಸುಳ್ಳು. ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಇವರು 2 ಮತ್ತು 3 ನೇ ಪ್ರತಿವಾದಿಯರ ತಂದೆ ಇರುವುದಿಲ್ಲ. ನಮ್ಮ ಊರಿನಲ್ಲಿ ದೇವಪ್ಪ ತಂದೆ ಪೀರಪ್ಪ ಲಮಾಣಿ ಎನ್ನುವವರು ಇದ್ದಾರೆ. ನಮ್ಮ ಊರಿನಲ್ಲಿ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಎನ್ನುವವರು ಇರುವುದಿಲ್ಲ. ಸದರಿ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಇವರು ನಮ್ಮ ಊರಿನಲ್ಲಿ ಇದ್ದರೋ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಖಚಿತ ಮಾಹಿತಿ ಇದೆ. ವಕೀಲರು ಸಾಕ್ಷಿಗೆ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಇವರು ಜೀವಂತ ಇರುತ್ತಾರೆ ಅಂತಿರೋ ಅಥವಾ ಇಲ್ಲ ಅಂತಿರೋ ಎಂದು ಪ್ರಶ್ನಿಸಿದಾಗ ಸಾಕ್ಷಿಯು ದ್ಯಾಮಪ್ಪ ಪೀರಪ್ಪನ ಮಗ ಇರುವುದಿಲ್ಲವೆಂದು, ಹಾಗೂ

ಪೀರಪ್ಪ ಮರಣ ಹೊಂದಿದ್ದಾನೆ ಎಂದು, ದ್ಯಾಮಪ್ಪ ಜೀವಂತ ಇರುತ್ತಾನೆ ಎಂದು ಹೇಳಿರುತ್ತಾರೆ. ದ್ಯಾಮಪ್ಪ ಈತನು ಗೇಮಪ್ಪ ಈತನ ಮಗ ಇರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದ್ಯಾಮಪ್ಪ ಈತನು ಪೀರಪ್ಪ ಈತನ ಮಗ ಇರುತ್ತಾನೆ ಅಂದರೆ ಸರಿಯಲ್ಲ.

ದಾವಾದ ಆಸ್ತಿಗಳನ್ನು ವಾದಿಯರೇ ವಹಿವಾಟು ಮಾಡುತ್ತಾರೆ ಅಂದರೆ ಸುಳ್ಳು. ನನಗೆ ಗೇಮಪ್ಪನ ಘರಾಣೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸುಳ್ಳು. ದೇಮಪ್ಪ ಉರ್ಫ್ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಇವರು ನಮ್ಮ ಸ್ವಂತ ಕಕ್ಕ ಇದ್ದರೂ ಸಹ ಸದರಿ ದೇಮಪ್ಪ ಇವರು ಗೇಮಪ್ಪನ ಮಗ ಇರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗೇಮಪ್ಪನಿಗೆ ದ್ಯಾಮವ್ವ ಮತ್ತು ಹನುಮವ್ವ ಎನ್ನುವವರು ಇಬ್ಬರೇ ಹೆಣ್ಣು ಮಕ್ಕಳು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ನನಗೆ ಗೊತ್ತಿಲ್ಲ. ಗೇಮಪ್ಪ ರಾಮಪ್ಪ ಲಮಾಣಿ ಈತನಿಗೆ 3 ಜನ ಹೆಣ್ಣು ಮಕ್ಕಳು ಇದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿಯವರ ಹೆಸರುಗಳು 1. ದ್ಯಾಮವ್ವ 2. ತುಳಚವ್ವ 3. ಹನುಮವ್ವ ಅಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ತುಳಚವ್ವಳ ಮಕ್ಕಳೇ ವಾದಿಯರು ಅಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ. ನ್ಯಾಯಾಲಯ, ಬ್ಯಾಡಗಿ.